**1990**ರ ದಶಕ. ಲೇಖಕ ಎ.ಎನ್. ಮೂರ್ತಿರಾಯರ 'ದೇವರು' ಕೃತಿಯ ಇಂಗ್ಲಿಷ್ ಅನುವಾದದ ಕುರಿತು, ಅವರೊಂದಿಗೆ ಮಾತುಕತೆಯಾಡಲು ಹೋಗಿದ್ದವರ ಜೊತೆಗೆ ನಾನಿದ್ದೆ. ಲೇಖಕ ಜಿ. ರಾಮಕೃಷ್ಣ, ಪುಸ್ತಕ ವ್ಯಾಪಾರಿ ಪು.ವ್ಯಾ. ಶ್ರೀನಿವಾಸ ಮತ್ತು ಅವರ ಜೊತೆಗೆ ನೆಪ ಮಾತ್ರಕ್ಕೆ ನಾನು. ಆವರೆಗೆ ನನಗೆ ಅವರ ಪರಿಚಯವಿರಲಿಲ್ಲ. ಅವರ ಪ್ರಬಂಧಗಳನ್ನು, ದೀಪಾವಳಿ ಸಂಚಿಕೆಗಳಲ್ಲಿ ಪ್ರಕಟವಾಗಿದ್ದ ವಿಚಾರಪೂರ್ಣ ಲೇಖನಗಳನ್ನು ಓದಿದ್ದೆ. ನಾನು ಇಪ್ಪತ್ತೈದು ವರ್ಷ ಹೊರ ರಾಜ್ಯದಲ್ಲಿದ್ದುದರಿಂದ ಕನ್ನಡದ ಅನೇಕ ಲೇಖಕರ ಪರಿಚಯವಿರಲಿಲ್ಲ. ಬೆಂಗಳೂರಿಗೆ ಬಂದ ನಂತರ ಕೆಲವರನ್ನಾದರೂ ಭೇಟಿ ಮಾಡುವ ಅವಕಾಶ ಸಿಕ್ಕಾಗ ಅದರಿಂದ ಬಹಳ ಸಂತೋಷವಾಗುತ್ತಿತ್ತು.

ಮೂರ್ತಿರಾಯರು ಆ ವೇಳೆಗೆ ನೂರು ಪೂರೈಸಿದ್ದರು. ಬೆಂಗಳೂರಿನ ಇಸ್ರೋ ಬಡಾವಣೆಯಲ್ಲಿದ್ದ ಅವರ ಮಗ ಎಂ.ಎನ್. ಸುಬ್ಬರಾಮಯ್ಯ ಅವರ ಮನೆಯಲ್ಲಿದ್ದರು. ಲವಲವಿಕೆಯಿಂದಿದ್ದರು. ಸರಸ ಮಾತುಗಾರಿಕೆ. ಮಾತಿನ ಮಧ್ಯೆ ನಗೆ ಚಟಾಕಿ ಹಾರಿಸುತ್ತಿದ್ದರು.

'ದೇವರು' ಪುಸ್ತಕದ ನಾಲ್ಕೈದು ಅಧ್ಯಾಯಗಳನ್ನು ಅವರೇ ಇಂಗ್ಲೀಷಿಗೆ ಅನುವಾದಿಸಿದ್ದರು. ಏನೋ ಕಾರಣದಿಂದ ಅದು ಅಲ್ಲಿಗೇ ನಿಂತಿತ್ತು. ಮುಂದೆ, ಮೂರ್ತಿರಾಯರು ಡಿಕ್ಟೇಟ್ ಮಾಡುತ್ತ ಹೋಗುವುದು, ಜಿ. ರಾಮಕೃಷ್ಣ ಅದನ್ನು ಬರೆದುಕೊಂಡು ಹಸ್ತಪ್ರತಿ ಸಿದ್ಧಪಡಿಸುವುದೆಂದು ಏರ್ಪಾಟಾಯಿತು. ಮತ್ತೇನೋ ಕಾರಣದಿಂದ ಆ ಕೆಲಸವೂ ಸರಾಗವಾಗಿ ಮುಂದುವರಿಯಲಿಲ್ಲ. ಆಗ ತಮ್ಮ ಮಗ ಸುಬ್ಬರಾಯ್ಯನನ್ನು ಅನುವಾದ ಮುಂದುವರಿಸಿ ಮುಗಿಸುವಂತೆ ಕೇಳಿಕೊಂಡರು. ಅವರು ಅನುವಾದಿಸಿದ್ದನ್ನು ಜಿ.ಆರ್. ನೋಡಿಕೊಡಬೇಕೆಂಬುದು ಅವರ ನಿಬಂಧನೆ ಮತ್ತು ಆಶಯ. ಹಾಗೆ ಕೆಲಸ ಮುಂದುವರಿದಿತ್ತು. ಸುಬ್ಬರಾಯ್ಯನವರ ಅನುವಾದ ಸರಿಯಾಗೇ ಇರುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಜಿ.ಆರ್. ಸೂಚಿಸಿದ ಸಲಹೆಗಳನ್ನು ಅವರು ಒಪ್ಪಿಕೊಳ್ಳುತ್ತಿದ್ದರು. ಅನಂತರ ಅದನ್ನು ಮೂರ್ತಿರಾಯರು ಪರಿಶೀಲಿಸುತ್ತಿದ್ದರು. ನಾವು ಅವರಲ್ಲಿಗೆ ಹೋದದ್ದು ಅಂಥ ಒಂದು ಸಂದರ್ಭದಲ್ಲಿ. ನಾನು ಮೂಕ ಪ್ರೇಕ್ಷಕ ಅಷ್ಟೇ. ಆದರೆ ಫೋಟೊ ಕ್ಲಿಕ್ಕಿಸುವ ಅವಕಾಶ ಒದಗಿತ್ತು. ಅವರು ಸಂತೋಷದಿಂದ ಒಪ್ಪಿದ್ದರು.

ಮೈಸೂರಿನ ಡಿ.ವಿ.ಕೆ. ಮೂರ್ತಿಯವರು ಪ್ರಕಟಿಸಿದ್ದ 'ದೇವರು' ಆ ವೇಳೆಗೆ ನಾಲ್ಕೈದು ಮುದ್ರಣಗಳನ್ನು ಕಂಡಿತ್ತು. 2006ರಲ್ಲಿ ಅದರ ಇಂಗ್ಲಿಷ್ ಅನುವಾದ 'ಗಾಡ್ ಎ ಕ್ರಿಯೇಷನ್ ಆಫ್ ಮ್ಯಾನ್' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗುವ ವೇಳೆಗೆ, ಕನ್ನಡದ 'ದೇವರು' 26 ಮರುಮುದ್ರಣಗಳನ್ನು ಕಂಡಿತ್ತು! ದೇವರಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದ ಮೂರ್ತಿರಾಯರು, ಆ ವೈಚಾರಿಕ ಕೃತಿಯಲ್ಲಿ ಅದನ್ನು ಸಾಧಾರಪೂರ್ವಕ ತೋರಿಸಿಕೊಟ್ಟಿದ್ದಾರೆ. ಪಂಡಿತ ಭಾಷೆಯ ಗೋಜಲಿಲ್ಲ, ಕಟುನುಡಿಗಳನ್ನು ಬಳಸಿಲ್ಲ. ತಮ್ಮ ವಾದಕ್ಕೆ ಅವರು ಓದಿರುವ ಗ್ರಂಥಗಳಿಂದ, ಸ್ವಂತ ಅನುಭವದಿಂದ ಸಮರ್ಥನೆ ನೀಡಿದ್ದಾರೆ. ದೇವರಿದ್ದಾನೆಯೇ, ದೇವರು ನಮಗೆ ಬೇಕೆ ಎಂಬ ಡೋಲಾಯಮಾನ ಮನಃಸ್ಥಿತಿಯಲ್ಲಿದ್ದವರು, ಪುಸ್ತಕ ಓದಿ ಒಂದು ನಿರಾಳ ಸ್ಥಿತಿಗೆ ತಲುಪಲು ಸಹಾಯಕವಾದ ಕೃತಿ ಅದು. ಹಾಗಾಗಿ ಅದು ಹೆಚ್ಚು ಓದುಗರನ್ನು ಆಕರ್ಷಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ.

ದೇವರು ಬೇಕು, ಆದರೆ ಅವನಿಲ್ಲ. ನಮ್ಮ ಬೇಕು ಬೇಡಗಳನ್ನು ಗಣನೆಗೆ ತೆಗೆದುಕೊಳ್ಳದ, 'ಸಾಕ್ಷಿ' ದೇವರೂ ಮತ್ತು ನಮ್ಮ ಸುಖದುಃಖಗಳನ್ನು ತನ್ನ ಆಟಕ್ಕೆ ಸಾಧನ ಅಥವಾ ಆಟದ ವೈಖರಿ ಎಂದು ಭಾವಿಸುವ ಲೀಲಾಲೋಲ ದೇವರೂ ನಮಗೆ ಪ್ರಸಕ್ತವಲ್ಲ. ನಮಗೆ ಬೇಕಾದ ದೇವರು